ಓ ಎಸ್ .ನಂ.**215/2012**

**ಪಿಡಬ್ಲ್ಯು – 1**

ಅರ್ಜಿಯನ್ನು ಪುರಸ್ಕರಿಸಿದ ಮೇರೆಗೆ

ದಿನಾಂಕ **17-02-2026** ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣ ವಚನವನ್ನು ಭೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ವಕೀಲರವರಿಂದ.**

1. ಸರ್ವೇ ನಂ.190 ಬ್ಲಾಕ್ ಪ್ಲಾಟ್ ನಂ.20 ಇದರ ಪಹಣಿ ಪತ್ರಿಕೆಯನ್ನು ನಿಪಿ.10 ಎಂದು, ಬ್ಲಾಕ್ 190 ಪಿ –ಪ್ಲಾಟ್ ನಂ.21 ದೃಢೀಕೃತ ಪಹಣಿ ಪತ್ರಿಕೆಯನ್ನು ನಿಪಿ.11 ಎಂದು, ಬ್ಲಾಕ್ 190 ಪಿ –ಪ್ಲಾಟ್ ನಂ.20 ದೃಢೀಕೃತ ಪಹಣಿ ಪತ್ರಿಕೆಗಳನ್ನು ನಿಪಿ.12 ರಿಂದ ನಿಪಿ.14 ಎಂದು, ಎಮ್ ಆರ್ ನಂ.1594 ಇದರ ದೃಢೀಕೃತ ದಾಖಲೆಗಳನ್ನು ನಿಪಿ.15 ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಪ್ರತಿವಾದಿ ಪರ ವಕೀಲರವರಾದ ಶ್ರೀ. ಎ ಸಿ ಪಿ ರವರಿಂದ**

1. ನನ್ನ ತಂದೆಯವರು ಜೀವಂತ ಇದ್ದಾಗ ಈ ದಾಖಲೆಗಳಿಗೆ ತಕರಾರು ಹಾಕಿಲ್ಲ. ನನ್ನ ತಂದೆಯವರು ಚಂದ್ರಶೇಖರ ರವರ ಹೆಸರು ದಾಖಲಿಸಿದಾಗ ತಕರಾರನ್ನು ಸಲ್ಲಿಸಿಲ್ಲ. ತಪ್ಪಾಗಿದೆ ಎಂದು ಗ್ರಾಮ ಪಂಚಾಯಿತಿಗೆ ಅರ್ಜಿಯನ್ನು ಕೊಟ್ಟಿಲ್ಲ. ಗ್ರಾಮ ಪಂಚಾಯಿತಿಯಲ್ಲಿ ಚಂದ್ರಶೇಖರ ರವರ ಹೆಸರು ದಾಖಲು ಆದ ಬಗ್ಗೆ ಗೊತ್ತಾದಾಗ ಗ್ರಾಮ ಪಂಚಾಯಿತಿಯ ವಿರುದ್ಧ ನೊಂದಣಿ ಕರೆಕ್ಷನ್ ಮಾಡಲು ಅರ್ಜಿ ಸಲ್ಲಿಸಿಲ್ಲ, ಆದರೆ ಜಿಲ್ಲಾಧಿಕಾರಿ ಕಚೇರಿಗೆ ಅರ್ಜಿ ಹಾಗೂ ಈ ದಾವೆಯನ್ನು ಸಲ್ಲಿಸಿದ್ದೆನು ಎಂದು ಹೇಳುತ್ತಾರೆ. ಸದರಿ ಅರ್ಜಿಯ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೀರಾ ಎಂದರೆ ಹಾಜರು ಪಡಿಸಿಲ್ಲ ಎಂದು ಹೇಳುತ್ತಾರೆ. ಚಂದ್ರಶೇಖರ ರವರ ಹೆಸರು 1986 ರಲ್ಲಿ ದಾಖಲು ಆಗಿದ್ದರೂ ಸಹ ಅದರ ಮೇಲೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ ಎಂದರೆ ಸಾಕ್ಷಿಯು ನಮಗೆ ಅದರ ಬಗ್ಗೆ ಗೊತ್ತಾಗಿಲ್ಲ ಎಂದು ಹೇಳುತ್ತಾರೆ.

ಓ ಎಸ್ .ನಂ.**215/2012**

**ಪಿಡಬ್ಲ್ಯು – 1**

2. ವಾದಿ/ಶಿವಪ್ಪ ಗುರುಬಸಪ್ಪ ಭಾರತಿ ಇವರು ನನ್ನ ತಂದೆ ಎಂದರೆ ಸರಿ. ಈ ದಾವೆಯನ್ನು ನನ್ನ ತಂದೆ ಮಾಡಿರುತ್ತಾರೆ ಎಂದರೆ ಸರಿ. 19–11–2024 ರಂದು ನನ್ನ ತಂದೆ ತೀರಿಕೊಂಡಿರುತ್ತಾರೆ. ನನ್ನ ಅಜ್ಜ ಯಾವಾಗ ತೀರಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ದಿಃ31–03–1984 ರಲ್ಲಿ ತೀರಿಕೊಂಡಿರುತ್ತಾರೆ ಎಂದು ಹೇಳುತ್ತಾರೆ.

3. ತಹಶೀಲ್ದಾರ ಕಡೆಯಿಂದ ಹಾಜರು ಪಡಿಸಿರುವ ನಿಪಿ.10 ರಿಂದ 15 ದಾಖಲೆಗಳ ಪ್ರಕಾರ ಚಂದ್ರಶೇಖರ ರವರು ತಮ್ಮ ಹೆಂಡತಿಗೆ ಮೃತ್ಯು ಪತ್ರದ ಪ್ರಕಾರ ದಾವಾ ಆಸ್ತಿ ಯನ್ನು ಬಿಟ್ಟುಕೊಟ್ಟಿದ್ದಾರೆ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. ಮೃತ್ಯು ಪತ್ರ ನೊಂದಾಯಿತ ಮೃತ್ಯು ಪತ್ರ ಎಂದರೆ ನನಗೆ ಗೊತ್ತಿಲ್ಲ. ಖರೀದಿ ಆದ ಪ್ಲಾಟ್ ನ ಬಗ್ಗೆ ನಾವು ಖರೀದಿ ಪತ್ರವನ್ನು ಹಾಜರು ಪಡಿಸಿಲ್ಲ. ಆಸ್ತಿಗಳ ಬಗ್ಗೆ ಸಮಜಾಯಿಶಿ ಪತ್ರ ಮಾಡುತ್ತಾರೆ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. ನಾವು ಕೇಳಿದ ಪ್ಲಾಟ್ ಒಂದನೇ ಪ್ರತಿವಾದಿಯ ಪ್ಲಾಟ್ ಅಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.**)**

ಓ. ಹೇ. ಕೆ. ಸರಿ ಇದೆ.

ನನ್ನ ಸಮಕ್ಷಮ

ಪ್ರಧಾನ ದಿವಾಣಿ ನ್ಯಾಯಾಧೀಶರು
ಮತ್ತು ಪ್ರಧಾನ ಜೆ.ಎಂ.ಎಫ್.ಸಿ. ಧಾರವಾಡ.

ಓ ಎಸ್ .ನಂ.**215/2012**

**ಪಿಡಬ್ಲ್ಯು – 1**

ಓ ಎಸ್ .ನಂ.**215/2012**

**ಪಿಡಬ್ಲ್ಯು – 1**